ಸರ್ಫರಾಜ್‌ನ ಕ್ಷೇಮ–ಕುಶಲ ವಿಚಾರಿಸಿಲ್ಲ. ಅವರೂ ವೀರೇಂದ್ರನ ಬಗ್ಗೆ ಏನೂ ತಿಳಿದುಕೊಂಡಿಲ್ಲ. ಇನ್ನು ಭೇಟಿಯ ಮಾತಂತೂ ದೂರವೇ ಉಳಿಯಿತು. ಆದರೂ ಕರ್ನಲ್ ಸರ್ಫರಾಜ್ ಹುಸೇನ್‌ರಿಗೆ ಆ ದಿನಗಳು ಅದೇಕೆ ನೆನಪಾಗುತ್ತಿರುತ್ತವೆ. ಅವರು ರಾವಲ್ಪಿಂಡಿಯ ರಸ್ತೆಗಳಲ್ಲಿ ತಮ್ಮ ದುಬಾರಿ ಕಾರನ್ನು ತೀವ್ರವೇಗದಿಂದ ಓಡಿಸುವಾಗೆಲ್ಲ ಅಥವಾ ಸೇನೆಯ ಗಾಡಿಯಲ್ಲಿ ಕುಳಿತು ಬೆಟ್ಟಗಳಲ್ಲಿ ಎಲ್ಲೆಲ್ಲಿಗೂ ಸಂಚರಿಸುತ್ತಿರುವಾಗ ಅವರೊಂದಿಗೆ ಮಾತಾಡಲು ಯಾರೂ ಇರುವುದಿಲ್ಲ. ಸೇನೆಯವರು ಇದ್ದರೂ ಅವರು ಮೌನವಾಗಿ ಕುಳಿತಿರುತ್ತಾರೆ. ಆಗೆಲ್ಲ ಅವರ ಮನಸ್ಸು ತಾನಾಗಿಯೇ ಹಿಂದಿನ ನೆನಪುಗಳೊಂದಿಗೆ ಮಾತಿಗಿಳಿಯುತ್ತದೆ... ಕೂಡಲೇ ವೀರೂನ ಮುಖ ಕಣ್ಣೆದುರಿಗೆ ಧುತ್ತೆಂದು ಬಂದು ನಿಲ್ಲುತ್ತದೆ. ಅವರಿಬ್ಬರದು ಕೆಂಪು ಗಜ್ಜರಿಯಂತಹ ಪಂಜಾಬಿ ಬಣ್ಣ, ಪಂಜಾಬಿ ಎತ್ತರ, ಪಂಜಾಬಿ ಹುಮ್ಮಸ್ಸು, ಮೈ–ಮನಸ್ಸು ಪಂಜಾಬಿ, ಪಂಜಾಬಿ ಸ್ವಭಾವ!... ಆದರೆ, ಇದೇನಾಯಿತು, ಸಟ್ಲೆಜ್ ನದಿಯ ಹರಿವಿನಲ್ಲಿಯೇ ಬಿರುಕು ಉಂಟಾಯಿತೇ?

ಅದೆಷ್ಟೊ ಬಾರಿ ಜೈನಬ್, 'ಗೆಳೆಯನ ನೆನಪು ಅಷ್ಟೊಂದು ಬರುತ್ತಿದ್ದರೆ, ನೀವು ಯಾಕೆ ಒಮ್ಮೆ ಫೋನ್ ಮಾಡಿ ನೋಡಬಾರದು?' ಎಂದಿದ್ದಳು.

ಅವಳ ಸಲಹೆ ಕೇಳಿದಾಗೆಲ್ಲ ಸರ್ಫರಾಜ್‌ನ ತುಟಿಗಳು ರೈಫಲ್ಲಿನ ನಳಿಕೆಯಂತೆ ನೇರ ಮತ್ತು ಒರಟಾಗುತ್ತಿದ್ದವು.

'ಅಲ್ಲ, ನೀವು ಡಿಫೆನ್ಸ್‌ನಲ್ಲಿದ್ದೀರಿ, ನೀವು ಒಮ್ಮೆ ದಿಲ್ಲಿಗೆ ಹೋಗಿ ಈಗ ಅವನ ಪೋಸ್ಟಿಂಗ್ ಯಾವ ಸೆಕ್ಟರ್‌ನಲ್ಲಿದೆ ಎಂಬುದನ್ನು ತಿಳಿದುಕೊಳ್ಳಬಹುದಲ್ಲ? ಹಾಗಾದಲ್ಲಿ ನಾನೂ ನಿಮ್ಮ ಜೊತೆಗೆ ಇಂಡಿಯಾಗೆ ಹೋಗಬಹುದು, ಅಜ್ಜಿಯ ಊರಿಗೂ ಹೋಗಿ ಸುತ್ತಾಡಿ ಬರಬಹುದು. ಅಲ್ಲಿನ ಹುರಿದ ಮಾಂಸದ ಹಪ್ಪಳ, ಕರಿದ ಮಾಂಸದ ಸಂಡಿಗೆಯಷ್ಟೇ ರುಚಿಯಾಗಿವೆ ಲಖನೌ ನೆನಪುಗಳು. ನಾವು ಮಕ್ಕಳಿದ್ದಾಗ ಅಲ್ಲಿಗೆ ಹೋದಾಗೆಲ್ಲ ಅಜ್ಜಿ ತರಿಸಿಕೊಡುತ್ತಿದ್ದಳು. ಅಲ್ಲದೆ, ಆ... ರಸ್... ರಸ್... ರಸಗುಲ್ಲಾ...ಗಳು, ಪ್ರತಿದಿನ ಸಂಜೆಯ ಹೊತ್ತು ತಲೆಯ ಮೇಲೆ ಹಂಡೆಯೊಂದನ್ನು ಹೊತ್ತುಕೊಂಡು ವ್ಯಕ್ತಿಯೊಬ್ಬ ಆ ಕೇರಿಯಲ್ಲಿ ರಸ್ಗುಲ್ಲಾ... ರಸ್ಗುಲ್ಲಾ... ಎಂದು ಪ್ರೀತಿಯಿಂದ ಕರೆಯುತ್ತ ರಸಗುಲ್ಲಾ ಮಾರಲು ಬರುತ್ತಿದ್ದ.'

ಮಕ್ಕಳೂ ಅದೆಷ್ಟೋ ಬಾರಿ 'ಡ್ಯಾಡಿ ಅದೆಷ್ಟು ಬಾರಿ ಗೆಳೆಯ ಗೆಳೆಯ ಎಂದು ಹೇಳುತ್ತೀ? ಆಕಡೆಯಿಂದ ಅವನು ನಿಮ್ಮ ಬಗ್ಗೆ ತಿಳಿದುಕೊಳ್ಳುವುದಿಲ್ಲ, ಈ ಕಡೆಯಿಂದ ನೀವು. ನಡೆಯಿರಿ, ನಮಗೆ ಒಮ್ಮೆ ಇಂಡಿಯಾ ಸುತ್ತಾಡಿಸಿಕೊಂಡು ಬನ್ನಿ, ನಮಗೂ ಒಂದು ಫಾರಿನ್ ಟ್ರಿಪ್ ಮಾಡಿದ ಹಾಗಾಗುತ್ತದೆ. ನೀವು ನಿಮ್ಮ ವೀರೇಂದ್ರಸಿಂಹ ಪಟಿಯಾಲಾ ಅವರನ್ನು ಭೇಟಿಯಾಗಿ. ಆದಾಗ್ಯೂ ಈಗ ಅವರ ಡೆಸಿಗ್ನೇಷನ್ ಏನಿದೆಯೋ? ಗೊತ್ತಾ ನಿಮಗೆ?' ಎಂದು ಕೇಳಿದ್ದರು.

ಬ್ರಿಟಿಷರು ತಮ್ಮ ಮಕ್ಕಳನ್ನು ಸೇನೆಯ ಅಧಿಕಾರಿಗಳನ್ನಾಗಿ ಮಾಡಬೇಕೆಂದು 1932ರಲ್ಲಿ ಡೆಹರಾಡೂನ್‌ನಲ್ಲಿ ಮಿಲ್ಟ್ರಿ ಅಕಾಡೆಮಿಯ ತಳಪಾಯ ಹಾಕಿದ್ದರು. ನಂತರ ಭಾರತೀಯರ ಮಕ್ಕಳೂ ಅಲ್ಲಿ ಸೇರಿಕೊಳ್ಳಲಾರಂಭಿಸಿದರು. ಅಕಾಡೆಮಿಯ ರಜಾದಿನಗಳಲ್ಲಿ ಮನೆಗೆ ಮರಳುವಾಗ ಒಂದೆರಡು ಬಾರಿ ಸರ್ಫರಾಜ್ ವೀರೇಂದ್ರನ ಮನೆಗೆ ಹೋಗಿದ್ದ. 'ವೀರೂನ ತಾಯಿ ಹೆಸರು ಬೇಳೆಯ ಪಾಯಸವನ್ನು ಮಾಡುತ್ತಾರೆ... ಆಹ್... ಅದ್ಭುತ! ಹಾಗೂ ಅವರು ತಮ್ಮ ಕೈಯಾರೆ ಮಾಡಿದ್ದ ಲಸ್ಸಿಗೆ ಒಂದು ಬೇರೆಯದೇ ಆದ ಪರಿಮಳವಿರುತ್ತದೆ' ಎಂದು ಸರ್ಫರಾಜ್ ಹೇಳುತ್ತಿದ್ದ. ಒಂದೆರಡು ಬಾರಿ ಆತನೂ ಇವನ ಮನೆಗೆ ಬಂದಿದ್ದ. ಅವನಿಗೆ ಸರ್ಫರಾಜ್‌ನ ಅಮ್ಮ ಮಾಡುತ್ತಿದ್ದ ಬಿರಿಯಾನಿ ಅತ್ಯಂತ ಇಷ್ಟವಾಗುತ್ತಿತ್ತು. ಊಟದ ಟೇಬಲ್ ಮೇಲೆ ವೀರೂ ಹರ್ಷದಿಂದ,